ಒಂದನೇ ಅಪರ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ,

ಕೊಳ್ಳೇಗಾಲ

ಸಿ ಸಿ ಸಂಖ್ಯೆ 2883/2023

ಚಾಸಾ 10 ಫ್ರಾಸಾ 4

| | | |
|---|---|---|
| ಸಾಕ್ಷಿಯ ಹೆಸರು | : | ಚಿಕ್ಕಕಾಳೇಗೌಡ |
| ತಂದೆಯ ಹೆಸರು | : | ಲೇಟ್ ಚನ್ನೇಗೌಡ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ನಿವೃತ್ತ ಪಿಎಸ್ಐ |
| ವಾಸ ಸ್ಥಳ | : | ಕೊಳ್ಳೇಗಾಲ |

ದಿನಾಂಕ 04.06.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ - ಮಾನ್ಯ ಸಸಅ ರವರಿಂದ

ನಾನು 2019 ರಿಂದ 2024 ರವರೆವಿಗೂ ಮ,ಮ.ಬೆಟ್ಟ ಪೊಲೀಸ್ ಠಾಣೆಯಲ್ಲಿ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 09.11.2023 ರಂದು ನಾನು ಠಾಣಾಧಿಕಾರಿಯಾಗಿದ್ದು ಸಂಜೆ 5.30 ರ ಸಮಯದಲ್ಲಿ ಚಾಸಾ-01 ರವರು ಹಾಜರು ಪಡಿಸಿದ ವರದಿ, ಮಾಲು ಹಾಗೂ ಆರೋಪಿಯನ್ನು ಸ್ವೀಕರಿಸಿ ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿ ಪ.ವ. ವರದಿ ತಯಾರಿಸಿ ಮೇಲಾಧಿಕಾರಿಗಳಿಗೂ ಹಾಗೂ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಚಾಸಾ -1 ರವರನ್ನು ಹಾಜರು ಪಡಿಸಿದ ಮುದ್ದೇ ಮಾಲುನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 125/2023 ಕ್ಕೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಆರೋಪಿಯ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿ ಠಾಣಾ ಸಿಬ್ಬಂಧಿಗಳ ಮುಖಾಂತರ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿಃ10.11.2023 ಚಾಸಾ-2 ರಿಂದ 6 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ದಿಃ22.11.2023 ರಂದು ಅಮಾನತ್ತು ಪಡಿಸಿಕೊಂಡ ಮುದ್ದೆಮಾಲುಗಳನ್ನು ಚಾಸಾ-7ರವರ ಮುಖಾಂತರ ರಾಸಾಯನಿಕ ಪರೀಕ್ಷೆಗೆ ಕಳುಹಿಸಿರುತ್ತೇನೆ. ನಂತರ ದಿಃ30.11.2023 ರಂದು ಚಾಸಾ 8 ರವರಿಂದ ಆರ್ ಎಫ್ ಎಸ್ ಎಲ್ ವರದಿಯನ್ನು ಸ್ವೀಕರಿಸಿರುತ್ತೇನೆ. ದಿಃ06.12.2023 ರಂದು ಅಬಕಾರಿ ಅಧಿಕಾರಿಗಳು ನೀಡಿದ ವರದಿಯನ್ನು ಸ್ವೀಕರಿಸಿರುತ್ತೇನೆ. ದಿಃ21.12.2023 ರಂದು 2ನೇ ಆರೋಪಿಯ ಹೇಳಿಕೆಯನ್ನು ಪಡೆದು ನೋಟೀಸು ಜಾರಿ ಮಾಡಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ21.12.2023 ರಂದು ಆರೋಪಿಗಳ ವಿರುದ್ಧ ತನಿಖೆಯಿಂದ ಆರೋಪ ಸಾಬೀತಾದ ಕಾರಣ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿ ಯು ದೂರಿನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-04 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-04(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ಯು ಪ್ರ.ವ.ವರದಿಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ಯು ಎಫ್ ಎಸ್ ಎಲ್ ವರದಿಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಎಫ್ ಎಸ್ ಎಲ್ ನಿಪಿ-6 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-6(ಎ)ಎಂದು ಗುರುತಿಸಲಾಯಿತು.

ಸಾಕ್ಷಿ ಯು ಸ್ಥಳ ಮಹಜರಿನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು.

ಸಾಕ್ಷಿ ಯು ಚಾಸಾ 9 ರವರು ನೀಡಿದ ಜ್ಞಾಪನ ಪತ್ರದಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-7 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ನಾನು ಆರೋಪಿತರು ಮತ್ತು ಮು.ಮಾನ್ನು ನೋಡಿ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 50 ಮಧ್ಯದ ಟೆಟ್ರಾ ಪ್ಯಾಕ್ ಗಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಒಟ್ಟಾರೆಯಾಗಿ ಮು.ಮಾ -01 ಮತ್ತು 2 ಎಂದು ಗುರುತಿಸಲಾಗಿದೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 2ನೇ ಆರೋಪಿಯು

ಈ ದಿನ ಗೈರು ಹಾಜರಾಗಿದ್ದು ಆರೋಪಿ ಪರ ವಕೀಲರು 2 ನೇ ಆರೋಪಿಯ ಗುರುತಿನ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಸ್ ಪಿ ಬಿ ವಕೀಲರಿಂದಃ**

ನಾನು ತನಿಖೆ ಮಾಡುವಾಗ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಸಹಿ ಮಾಡಬೇಕಾಗುತ್ತದೆ ಎಂದರ ಸರಿ . ತಿದ್ದುಪಡಿಯಾಗಿದ್ದ ಪಕ್ಷದಲ್ಲಿ ಅಂತಹ ಸ್ಥಳದಲ್ಲಿ ಕಿರು ಸಹಿ ಹಾಕುತ್ತೇನೆ ಎಂದರೆ ಸರಿ . ಮಾಲು ಪಟ್ಟಿಯಲ್ಲಿ ಕ್ರಮ ಸಂಖ್ಯೆ 4 ನ್ನು ಹೊಡೆದು ಹಾಕಿದ್ದು ಇಲ್ಲಿ ಯಾವುದೇ ಸಹಿ ಇರುವುದಿಲ್ಲ ಎಂದರೆ ಸರಿ . ಆರೋಪಿಯ ಮನೆಯ ಹಿಂಭಾಗದ ಸ್ಥಳದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನಿಪಿ 1 ರಲ್ಲಿ ಘಟನಾ ಸ್ಥಳ ಮ.ಮ.ಬೆಟ್ಟಗ್ರಾಮದ ತೋಟಗಾರಿಕೆ ಇಲಾಖೆಯ ಕಚೇರಿಯ ಮುಂಭಾಗದ ಸಾರ್ವಜನಿಕ ರಸ್ತೆ ಎಂದು ನಮೂದಾಗಿದೆ ಎಂದರೆ ಸರಿ .ಮೇಲಾಧಿಕಾರಿಗಳು ನೀಡಿದ ದೂರಿನ ಆದಾರದ ಮೇಲೆ ನಾನು ನಿಪಿ 5 ರ ಪ್ರಥಮ ವರ್ತಮಾನ ವರದಿ ತಯಾರಿಸಿರುತ್ತೇನೆ ಎಂದರೆ ಸರಿ . ನಾನು ಯಾವುದೇ ತನಿಖೆ ನಡೆದಿಸಿರವುದಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳು ನೀಡಿರುವ ದಾಖಲೆಗಳಿಗೆ ನಾನು ಸಹಿ ಮಾಡಿ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ.ಗಳಿಗೂ ಆರೋಪಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ರಾಸಾಯನಿಕ ವರದಿಯನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ತನಿಖೆಯಿಂದ ಆರೋಪಿಯ ವಿರುದ್ಧ ಯಾವುದೇ ಆರೋಪ ಸಾಭೀತಾಗದೇ ಇದ್ದರು ಚಾಸಾ 1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿಗಳ ಹೇಳಿಕೆಗಳನ್ನು ದಾಖಲಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ತನಿಖೆ ನಡೆಸಿರುವುದಿಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲಿದ್ದ ಮು.ಮಾಲುಗಳನ್ನು ಬಳಸಿಕೊಂಡು ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಎಂ. ರಂಜಿತ್ ಕುಮಾರ್)
ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.

## ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ

## ಸಿ ಸಿ ಸಂಖ್ಯೆ 2883/2023

ಚಾಸಾ 1 ಪ್ರಾಸಾ 5

| | | |
|---|---|---|
| ಸಾಕ್ಷಿಯ ಹೆಸರು | : | ಬಸವರಾಜು |
| ತಂದೆಯ ಹೆಸರು | : | ಸುಗಪ ಉಪಲದಿನ್ನಿ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ಪಿಎಸ್ಐ, ರಾಜ್ಯ ಗುಪ್ತ ವಾರ್ತೆ |
| ವಾಸ ಸ್ಥಳ | : | ವಿಜಯಪುರ |

ದಿನಾಂಕ 04.06.2026 ರಂದು ಸಾಕ್ಷಿಯು ವೀಡಿಯೋ ಕಾನ್ಫರೆನ್ಸ ಮುಖಾಂತರ ಹಾಜರಾಗಿದ್ದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ – ಮಾನ್ಯ ಸಸಅ ರವರಿಂದ

ನಾನು ದಿನಾಂಕ 13.01.2023 ರಿಂದ 08.05.2025 ರವರೆಗೆ ಕೊಳ್ಳೇಗಾಲ ಮ.ಮ.ಬೆಟ್ಟ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 09.11.2023 ರಂದು ಮಧ್ಯಾಹ್ನ 1.45 ರ ಸಮಯದಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ಕೊಳ್ಳೆಗಾಲ ಡಿ ಎಸ್ ಪಿ ಸ್ಕ್ವಾಡ್ ರವರಿಂದ ನನಗೆದೂರವಾಣಿ ಕರೆ ಬಂದಿದ್ದು ಅವರು ಒಂಟಿ ದಿಬ್ಬ ಜಯಮ್ಮನದೊಡ್ಡಿ ಗ್ರಾಮದಲ್ಲಿ ಸಣ್ಣಮ್ಮ ಕೋಂ ಮಾದಪ್ಪ ಎನ್ನುವರು ಅಕ್ರಮವಾಗಿ ಮಧ್ಯ ಸಂಗ್ರಹಿಸಿ ಮಾರಾಟ ಮಾಡುತ್ತಿದ್ದಾರೆ ಎಂದು ತಿಳಿಸಿದ ಮೇರೆಗೆ ನಾನ, ಚಾಸಾ– 4 ರಿಂದ 6 ರವರುಗಳನ್ನು ಇಲಾಖಾ ವಾಹನದಲ್ಲಿ ಕರೆದುಕೊಂಡು ಪೊನ್ನಾಚಿ ಗ್ರಾಮದಲ್ಲಿರುವ ಅರಣ್ಯ ಇಲಾಖೆಯ ಬಳಿ ಹೋಗಿ ವನಪಾಲಕರಾದ ಚಾಸಾ 2 ಮತ್ತು 3 ರವರನ್ನು ಕರೆದು ಅಕ್ರಮ ಮಧ್ಯ ಮಾರಾಟ ಬಗ್ಗೆ ಬಂದಿದ್ದ ಮಾಹಿತಿಯನ್ನು ಅವರಿಗೆ ತಿಳಿಸಿ ಪಂಚರಾಗಲು ಕೋರಿಕೊಂಡಿದ್ದು ಅವರು ಒಪ್ಪಿದಮೇರೆಗೆ ಸ್ಥಳದಲ್ಲಿ ಅವರಿಗೆ ನೋಟೀಸು ಜಾರಿ ಇಲಾಖವಾಹನದಲ್ಲಿ ನಾವುಗಳು ಗೊಟ್ಟೆ ದಿಬ್ಬ ಗ್ರಾಮದ ಬಳಿ ಹೋಗಿ ಸಣ್ಣಮ್ಮನವರ ಮನೆ ಬಳಿ ನಿಂತುನೋಡಲಾಗಿ ಸಣ್ಣಮ್ಮನ ಮನೆಯ ಹಿಂಭಾಗದಹಿತ್ತಲಿನಲ್ಲಿ ಮಧ್ಯವನ್ನು ಸಾರ್ವಜನಿಕರಿಗೆ ಕೊಡುತ್ತಿರುವುದು ಕಂಡು ಬಂದಿರುತ್ತದೆ. ನಂತರನಾವುಗಳು ಸಣ್ಣಮ್ಮನ ಬಳಿ ಹೋಗಿ ತಗಡಿನಿಂದ ಮುಚ್ಚಿದ್ದ ರಟ್ಟಿನ ಬಾಕ್ಸುಗಳನ್ನು ಮುಚ್ಚಿರುವುದು ಕಂಡು ಬಂದಿದ್ದು ಅವುಗಳು ಒಟ್ಟಾರೆ 10 ಬಾಕ್ಸಗಳಿದ್ದು ಅವುಗಳನ್ನು

ಬಿಚ್ಚಿ ನೋಡಲಾಗಿ 9 ಬಾಕ್ಸಗಳಲ್ಲಿ ತಲಾ 90 ಎಂ ಎಲ್ ನ 96 ಹೈವಾರ್ಡ್ಸ್ ಚಿಯರ್ಸ್ ವಿಸ್ಕಿ ಟೆಟ್ರಾ ಪ್ಯಾಕ್ ಗಳು ಇರುವುದು ಕಂಡು ಬಂದಿರುತ್ತದೆ. ಉಳಿದ ಮತ್ತೊಂದು ಬಾಕ್ಸಿನಲ್ಲಿ 180 ಎಂ ಎಲ್ ನ 16 ಬ್ಯಾಗ್ ಪೈಪರ್ ಡಿಲಕ್ಸ ವಿಸ್ಕಿ ಪೌಚುಗಳಿದ್ದವು. ನಂತರ ಆಕೆಯನ್ನು ನಿಮ್ಮ ಬಳಿ ಮದ್ಯವನ್ನು ಇಟ್ಟುಕೊಂಡು ಮಾರಾಟಮಾಡಲು ಪರವಾನಿಗೆ ಇದೆಯೇ ಎಂದು ಕೇಳಲಾಗಿ ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ಕೌದಳ್ಳಿ ಮತ್ತು ಹನೂರು ಬಾರುಗಳಿಂದ ತಂದು ಇಲ್ಲಿ ಹೆಚ್ಚಿನ ಬೆಲೆಗೆ ಮಾರಾಟಮಾಡುತ್ತಿದ್ದೇನೆ ಎಂದು ತಿಳಿಸಿದರು. ನಂತರಸ್ಥಳದಲ್ಲಿ ದೊರೆತ ಮದ್ಯ ತುಂಬಿದ ತಲಾ ರಟ್ಟಿನ ಬಾಕ್ಸಿನಿಂದ 5 ಮದ್ಯದ ಪೌಚುಗಳನ್ನು ಬೇರ್ಪಡಿಸಿ ಒಂದು ಬಿಳಿ ಚೀಲದಲ್ಲಿ ಹಾಕಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಲೆಂದು ಬಟ್ಟೆ ಸುತ್ತಿ ದಾರದಿಂದ ಕಟ್ಟಿ ಇಲಾಖಾ ಎಂ ಎಸ್ ಅಕ್ಷರದಿಂದ ಸೀಲು ಮಾಡಿರುತ್ತೇವೆ. ನಂತರ ಆರೋಪಿಯನ್ನು ದಸ್ತಗಿರಿ ಮಾಡಿ, ಆರೋಪಿ ಮತ್ತು ಮುದ್ದೆಮಾಲಿನ ಸಮೇತ ಕಚೇರಿಗೆ ಬಂದು ಚಾಸಾ-1 ರವರು ಸ್ವ ವರದಿಯನ್ನು ತಯಾರಿಸಿ ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಮಹಜರ್ ನ್ನು ಮದ್ಯಾಹ್ನ 2.45 ರಿಂದ ಸಂಜೆ 4.00 ಗಂಟೆಯ ರವರೆಗೆ ನಡೆಸಿರುತ್ತೇವೆ. ಮಹಜರ್ ಕಾಲದಲ್ಲಿ ಪೋಟೋಗಳನ್ನು ತೆಗೆಸಿರುತ್ತೇವೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸದರಿ ದಾಖಲೆ ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಇ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ, ಸದರಿ ದಾಖಲೆ ದೂರಿನ ನಿವೇದನೆ ಆಗಿದ್ದು, ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಿದ್ದು, ಸಾಕ್ಷಿಯು ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ 1 ರ ಕಾಲದಲ್ಲಿ ತೆಗೆದ ಬಾವಚಿತ್ರವನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ 2 ಮತ್ತು 3 ಎಂದು ಗುರುತಿಸಲಾಗಿರುತ್ತದೆ.

ನಾನು ಆರೋಪಿತರು ಮತ್ತು ಮು.ಮಾನ್ನು ನೋಡಿ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 50 ಮದ್ಯದ ಟೆಟ್ರಾ ಪ್ಯಾಕ್ ಗಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಒಟ್ಟಾರೆಯಾಗಿ ಮು.ಮಾ -01 ಮತ್ತು 2 ಎಂದು ಗುರುತಿಸಲಾಗಿದೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 2ನೇ ಆರೋಪಿಯು ಈ ದಿನ ಗೈರು ಹಾಜರಾಗಿದ್ದು ಆರೋಪಿ ಪರ ವಕೀಲರು 2 ನೇ ಆರೋಪಿಯ ಗುರುತಿನ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್ ಪಿ ಬಿ . ವಕೀಲರಿಂದಃ**

ನಿಪಿ 1 ಮತ್ತು 4 ರಲ್ಲಿ ಇಲಾಖಾ ವಾಹನ ಸಂಖ್ಯೆ ನಮೂದಿಸಿರುವುದಿಲ್ಲ ಎಂದರೆ ಸರಿ . ನಿಪಿ 1 ರ ಮಹಜರಿನಲ್ಲಿ ಸ್ಥಳೀಯರನ್ನು ಪಂಚರಾಗಿ ನೇಮಿಸಿಕೊಂಡಿರುವುದಿಲ್ಲ ಎಂದರೆ ಸರಿ . ನಿಪಿ 1 ರಲ್ಲಿ ಅಕ್ರಮ ಮದ್ಯ ದೊರೆತಿದೆ ಎಂದು ಹೇಳಲಾಗುವ ಮನೆಯ ನಂಬರ್ ಅಳತೆ, ವಿಸ್ತೀರ್ಣ ಮತ್ತು ಮನೆಯ ವಿವರವನ್ನು ನಮೂದಿಸಿರವುದಿಲ್ಲ ಎಂದರೆ ಸರಿ . ನಿಪಿ 1 ರಲ್ಲಿ ಘಟನಾ ಸ್ಥಳ ಮ.ಮ.ಬೆಟ್ಟದ ತೋಟಗಾರಿಕೆ ಇಲಾಖೆ ಕಚೇರಿಯ ಮುಂಭಾಗದ ಸಾರ್ವಜನಿಕ ಸ್ಥಳ ಎಂದುನಮೂದಿಸಿರುತ್ತೇವೆ ಎಂದರೆ ಸಾಕ್ಷಿಯು ಕೈತಪ್ಪಿನಿಂದ ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ದಾಳಿ ಸಂದರ್ಬದಲ್ಲಿ ದಾಳಿ ನಡೆಸಿದ ಮನೆಯಲ್ಲಿ ಎಷ್ಟು ಜನ ಇದ್ದರು ಎಂದು ಮಾಹಿತಿ ಪಡೆದುಕೊಂಡಿರುವುದಿಲ್ಲ. ಮು.ಮಾ.1 ಮತ್ತು 2 ಸಾಮಾನ್ಯವಾಗಿ ಮಧ್ಯದ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ . ಮುದ್ದೆ ಮಾಲಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ 1ನ್ನು ಠಾಣೆಯಲ್ಲಿ ಬೆರಳಚ್ಚು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ನ್ನು ಎಲ್ಲಿ ಮುದ್ರಿಸಲಾಗಿರುತ್ತದೆ ಎಂದು ನಿಪಿ 1 ರಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲದೆ ಇದ್ದರು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣಾ ಅಂಕಿ ಅಂಶಗಳಿಗೋಸ್ಕರ ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. 60 ವರ್ಷ ಮೇಲ್ಪಟ್ಟ 1 ನೇ ಆರೋಪಿ ಎಲ್ಲೂ ಓಡಾಡಲೂಸಾಧ್ಯವಾಗದೆ ಇರುವ ಪರಿಸ್ಥಿತಿಯಲ್ಲಿದ್ದುಅವರ ವಿರುದ್ಧ ನಾವು ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗಳಿಗೂ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಎಂ. ರಂಜಿತ್ ಕುಮಾರ್)
ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.

## ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ

## ಸಿ ಸಿ ಸಂಖ್ಯೆ 551/2019

ಚಾಸಾ 26 ಪ್ರಾಸಾ 7

| | | |
|---|---|---|
| ಸಾಕ್ಷಿಯ ಹೆಸರು | : | ಪರಶುರಾಮ.ಬಿ |
| ತಂದೆಯ ಹೆಸರು | : | ಲೇಟ್ ಬೆಟ್ಟೇಗೌಡ |
| ವಯಸ್ಸು | : | 67 ವರ್ಷ |
| ಉದ್ಯೋಗ | : | ನಿವೃತ್ತ ಪಿ.ಐ |
| ವಾಸ ಸ್ಥಳ | : | ಬೆಂಗಳೂರು |

ದಿನಾಂಕ 01.06.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ – ಮಾನ್ಯ ಸಸಅ ರವರಿಂದ
(ಸಾಕ್ಷಿಯು ವೀಡಿಯೋ ಕಾನ್ಫರೆನ್ಸ್ ಮುಖಾಂತರ ಹಾಜರಾಗಿರುತ್ತಾರೆ.)

ನಾನು ಸೆಪ್ಟೆಂಬರ್ 2016 ರಿಂದ ಅಕ್ಟೋಬರ್ 2018 ರವರೆವಿಗೂ ಹನೂರು ಪೊಲೀಸ್ ಠಾಣೆಯಲ್ಲಿ ಪಿ.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 13.08.2018 ರಂದು ಚಾಸಾ–25 ರವರಿಂದ ಪ್ರಕರಣದ ಕಡತವನ್ನು ಪಡೆದಕೊಂಡು ತನಿಖೆ ಮುಂದುವರೆಸಿ, ದಿಃ17.09.2018 ರಂದು ಆರೋಪಿಯು ಠಾಣೆಗೆ ಹಾಜರಾದ ಮೇರೆಗೆ ಆತನನ್ನು ವಿಚಾರಣೆಗೆ ಒಳಪಡಿಸಿ ಆರೋಪಿಯ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿ ಸೂಕ್ತ ಜಾಮೀನಿನ ಮೇರೆಗೆ ಬಿಡುಗಡೆ ಮಾಡಿರುತ್ತೇನೆ. ನಂತರ ಅದೇ ದಿನ ಅಪಘಾತ ಪಡಿಸಿದ ವಾಹನವನ್ನು ಐಎಂವಿ ಪರೀಕ್ಷೆಗೆ ಕಳುಹಿಸುವ ಸಲುವಾಗಿ ಚಾಮರಾಜನಗರ ಆರ್.ಟಿ.ಒ ರವರಿಗೆ ಪತ್ರ ವ್ಯವಹಾರ ನಡೆಸಿರುತ್ತೇನೆ. ನಂತರ ದಿಃ10.10.2018 ರಂದು ಚಾಸಾ –6 ರವರು ಠಾಣೆಗೆ ಹಾಜರಾದ ಮೇರೆಗೆ ಅವರಿಗೆ ಐಎಂವಿ ಕಲಂಃ133 ಅಡಿಯಲ್ಲಿ ನೋಟೀಸು ಜಾರಿ ಮಾಡಿ ಅವರಿಂದ ವಾಹನದ ದಾಖಲಾತಿಗಳು ಹಾಗೂ ಅವರ ಪ್ರತ್ಯುತ್ತರವನ್ನು ಪಡೆದುಕೊಂಡಿರುತ್ತೇನೆ. ನಂತರ ಅದೇ ದಿನ ಚಾಸಾ –6 ರವರಿಂದ ಇಂಡೆಮ್ನಿಟಿ ಬಾಂಡ್ ಪಡೆದು ಅಪಘಾತ

ಪಡಿಸಿದ ವಾಹನವನ್ನು ಸದರಿಯವರ ವಶಕ್ಕೆ ನೀಡಿರುತ್ತೇನೆ. ನಂತರ ಅದೇ ದಿನ ನಾನು ವರ್ಗಾವಣೆಗೊಂಡ ಕಾರಣ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-27 ರವರಿಗೆ ನೀಡಿರುತ್ತೇನೆ.

ಸಾಕ್ಷಿಯು ಇಂಡೆಮ್ನಿಟಿ ಬಾಂಡ್ ನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-15 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ವಾಹನದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-18 ಎಂದು ಗುರುತಿಸಲಾಗಿದೆ.

ನಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ಈ ದಿನ ನ್ಯಾಯಾಲಯದ ಮುಂದೆ ಗೈರು ಹಾಜರಾಗಿದ್ದು, ಆರೋಪ ಪರ ವಕೀಲರು ಆರೋಪಿಯ ಗುರುತಿನ ಬಗ್ಗೆ ತಕರಾರು ಇರುವುದಿಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀಮತಿ ಪಿ.ಎ.ಎಸ್ ವಕೀಲರಿಂದಃ (ಎಂ.ಎಸ್.ಎಸ್.ವಕೀಲರ ಪರವಾಗಿಃ**

ಚಾಸಾ-1 ರವರು ನೀಡಿದ ಸುಳ್ಳು ದೂರಿನ ಮೇರೆಗೆ ದಾಖಲಾತಿಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ಮತ್ತು ಮೃತರ ಕುಟುಂಬದವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಅಪಘಾತಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಎಂ. ರಂಜಿತ್ ಕುಮಾರ್)
ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.

ಒಂದನೇ ಅಪರ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ,

ಕೊಳ್ಳೇಗಾಲ

ಸಿ ಸಿ ಸಂಖ್ಯೆ 551/2019

ಚಾಸಾ 25 ಪ್ರಾಸಾ 6

| | | |
|---|---|---|
| ಸಾಕ್ಷಿಯ ಹೆಸರು | : | ರಾಜ್‌ಶೇಖರ್ |
| ತಂದೆಯ ಹೆಸರು | : | ಲೇಟ್ ಬಸವರಾಜು ಅರಸ್ |
| ವಯಸ್ಸು | : | 62 ವರ್ಷ |
| ಉದ್ಯೋಗ | : | ನಿವೃತ್ತ ಎಎಸ್‌ಐ |
| ವಾಸ ಸ್ಥಳ | : | ಹನೂರು |

ದಿನಾಂಕ 01.06.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ - ಮಾನ್ಯ ಸಸಅ ರವರಿಂದ

ನಾನು 2017 ರಿಂದ 2025 ರವರೆವಿಗೂ ಹನೂರು ಪೊಲೀಸ್ ಠಾಣೆಯಲ್ಲಿ ಎಎಸ್‌ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 11.08.2018 ರಂದು ನಾನು ಠಾಣಾಧಿಕಾರಿಯಾಗಿದ್ದು ಮಧ್ಯಹ್ನಾ ಸುಮಾರು 1-20 ರ ಸವಯದಲ್ಲಿ ಚಾಸಾ-24 ರವರು ಕೋಳ್ಳೇಗಾಲ ಸರ್ಕಾರಿ ಆಸ್ಪತ್ರೆಯಲ್ಲಿ ಚಾಸಾ -1 ರವರಿಂದ ದೂರನ್ನು ಪಡೆದು ನನ್ನ ಮುಂದೆ ಹಾಜರುಪಡಿಸಿದ ಮೇರೆಗೆ ಅದನ್ನು ಸ್ವೀಕರಿಸಿ ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿ ಪ.ವ. ವರದಿ ತಯಾರಿಸಿ ಮೇಲಾಧಿಕಾರಿಗಳಿಗೂ ಹಾಗೂ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಅಪಘಾತ ಸ್ಥಳಕ್ಕೆ ಭೇಟಿ ನೀಡಿ ಚಾಸಾ-7 ರವರು ಅಪಘಾತ ಸ್ಥಳವನ್ನು ತೋರಿಸಿದ ಮೇರೆಗೆ ಚಾಸಾ-8 ಮತ್ತು 9 ರವರ ಸಮಕ್ಷಮ ಮಧ್ಯಹ್ನಾ 2-15 ರಿಂದ 3-15 ರವರೆಗೆ ಮಹಜರ್ ಕ್ರಮ ಜರುಗಿಸಿ ಸ್ಥಳದಲ್ಲಿ ಕೆಎ-11 ಬಿ -2256 ಮ್ಯಾಕ್ಸಿ ಕ್ಯಾಬ್ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ನಂತರ ಅಮಾನತ್ತು ಪಡಿಸಿಕೊಂಡು ಮು.ಮಾಲನ್ನು ಮಾಲು ಪಟ್ಟಿ ಸಂಖ್ಯೆ -104/2018 ಕ್ಕೆ ಅಳವಡಿಸಿ

ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ–26 ರವರಿಗೆ ನೀಡಿರುತ್ತೇನೆ.

ಸಾಕ್ಷಿ ಯು ದೂರಿನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ–16 ಮತ್ತು ಸಾಕ್ಷಿಯ ಸಹಿಯನ್ನು ನಿಪಿ–16(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ಯು ಸ್ಥಳ ಮಹಜರಿನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–04 ಎಂದು ಸಾಕ್ಷಿಯ ಸಹಿಯನ್ನು ನಿಪಿ–4(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿ ಯು ಪ್ರ.ವ.ವರದಿಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ–17 ಮತ್ತು ಸಾಕ್ಷಿಯ ಸಹಿಯನ್ನು ನಿಪಿ–17(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ–4 ರ ಕಾಲದಲ್ಲಿ ಅಮಾನತು ಪಡಿಸಿಕೊಂಡ ವಾಹನದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಸದರಿ ಭಾವಚಿತ್ರವನ್ನು ತಕರಾರಿಗೆ ಒಳಪಟ್ಟು ನಿಪಿ–18 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀಮತಿ ಪಿ.ಎ.ಎಸ್ ವಕೀಲರಿಂದಃ (ಎಂ.ಎಸ್.ಎಸ್.ವಕೀಲರ ಪರವಾಗಿಃ**

ದಿಃ11.08.2018 ರಂದು ಬೆಳಗ್ಗೆ 8 ರಿಂದ 01 ಗಂಟೆಯವರೆಗೆ ಠಾಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಚಾಸಾ–1ರಿಂದ ಚಾಸಾ–5 ರವರು ಬೆಳಕವಾಡಿ ಗ್ರಾಮದವರು ಎಂದರೆ ಸರಿ. ಚಾಸಾ–1 ರವರು ನೀಡಿದ ಸುಳ್ಳು ದೂರನ್ನು ಸ್ವೀಕರಿಸಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ –8 ಮತ್ತು 9 ರವರಿಗೆ ಯಾವುದೇ ನೋಟೀಸು ನೀಡಿರುವುದಿಲ್ಲ. ಚಾಸಾ–1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ನಿಪಿ–4 ರಂತೆ ಸುಳ್ಳು ಮಹಜರ್ ಕ್ರಮ ಜರುಗಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–18 ರಲ್ಲಿ ದಿನಾಂಕ ಮತ್ತು ಸಮಯ ನಮೂದು ಆಗಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ–1 ಮತ್ತು ಮೃತರ ಕುಟುಂಬದವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ಆರೋಪಿಗೂ ಅಪಘಾತಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಎಂ. ರಂಜಿತ್ ಕುಮಾರ್)
ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.

ಒಂದನೇ ಅಪರ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ,

ಕೊಳ್ಳೇಗಾಲ

ಸಿ ಸಿ ಸಂಖ್ಯೆ 20/2018

ಚಾಸಾ 1 ಫ್ರಾಸಾ 2

| | | |
|---|---|---|
| ಸಾಕ್ಷಿಯ ಹೆಸರು | : | ರಾಜ್‌ಶೇಖರ್ |
| ತಂದೆಯ ಹೆಸರು | : | ಲೇಟ್ ಬಸವರಾಜು ಅರಸ್ |
| ವಯಸ್ಸು | : | 62 ವರ್ಷ |
| ಉದ್ಯೋಗ | : | ನಿವೃತ್ತ ಎಎಸ್‌ಐ |
| ವಾಸ ಸ್ಥಳ | : | ಹನೂರು |

ದಿನಾಂಕ 01.06.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ - ಮಾನ್ಯ ಸಸಅ ರವರಿಂದ

ನಾನು 2017 ರಿಂದ 2025 ರವರೆವಿಗೂ ಹನೂರು ಪೊಲೀಸ್ ಠಾಣೆಯಲ್ಲಿ ಎಎಸ್‌ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 20.05.2017 ರಂದು ನನ್ನನ್ನು ಮತ್ತು ಚಾಸಾ -2 ರಿಂದ 5 ರವರಗಳನ್ನು ಬೆಳಗ್ಗಿನ ಗಸ್ತಿನಲ್ಲಿ ಅಕ್ರಮ ಚಟುವಟಿಕೆಗಳ ತಡೆ ಕಾರ್ಯಚರಣಗೆಗೆ ನಿಯೋಚನೆಗೊಂಡಿದ್ದು ಅದರಂತೆ ನಾವುಗಳು ಪೊಲೀಸ್ ಠಾಣೆ ಯಿಂದ ಬೆಳಗ್ಗೆ 8-30 ರ ಸಮಯದಲ್ಲಿ ಕೆಎ-10 ಜಿ-490 ಇಲಾಖಾ ವಾಹನದಲ್ಲಿ ಹೊರಟು ಮಂಗಲ ಗ್ರಾಮದ ಕಡೆ ಗಸ್ತಿನಲ್ಲಿರಬೇಕಾದರೆ ನಮಗೆ ಯಾರೋಬ್ಬ ಆಸಾಮಿಯು ಒಂದು ಬಾಕ್ಸಿನಲ್ಲಿ ಅಕ್ರಮ ಮದ್ಯವನ್ನು ಮಾರಾಟ ಮಾಡಲು ಕಣ್ಣೂರಿನ ಕಡೆಗೆ ತೆಗೆದುಕೊಂಡು ಹೋಗುತ್ತಿದ್ದಾನೆ ಎಂದು ಮಾಹಿತಿ ಬಂದಿದ್ದು, ಅದರಂತೆ ನಾವು ಕಣ್ಣೂರಿನ ಮುಖ್ಯ ರಸ್ತೆಯಲ್ಲಿರುವ ಶ್ರೀ ಬಸವೇಶ್ವರ ದೇವಸ್ಥಾನದ ಬಳಿ ಜೀಪನ್ನು ನಿಲ್ಲಿಸಿ ನಿಂತು ನೋಡುತ್ತಿದ್ದಾಗ ಒಬ್ಬ ಆಸಾಮಿಯು ಒಂದು ಹಳದಿ ಬಟ್ಟೆಯಿಂದ ಬಾಕ್ಸನ್ನು ಸುತ್ತಿಕೊಂಡು ತಲೆಯ ಮೇಲೆ ಹೊತ್ತಿಕೊಂಡು ಹೋಗುತ್ತಿದ್ದು, ನಾವು ಆತನನ್ನು ನಿಲ್ಲಿಸಿ ಬಾಕ್ಸಿನಲ್ಲಿ ಏನು ಇದೆ ಎಂದು ಪರಿಶೀಲಿಸಲಾಗಿ ಸದರಿ ಬಾಕ್ಸಿನಲ್ಲಿ 90 ಎಂ.ಎಲ್ ನ 75 ಹೈವಾರ್ಡ್ಸ್ ಚಿಯರ್ಸ ವಿಸ್ಕಿಯ ಮದ್ಯದ

ಪೌಚುಗಳು ಇರುವುದು ಕಂಡು ಬಂದಿರುತ್ತದೆ ನಂತರ ಆತನನ್ನು ಮಧ್ಯಸಾಗಾಣಿಕೆ ಮಾಡಲು ಪರವಾನಿಗೆ ಇದೇಯೇ ಎಂದು ಕೇಳಲಾಗಿ ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ತಿಳಿಸಿರುತ್ತಾನೆ. ನಂತರ ಆತನ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ತನ್ನ ಹೆಸರು ಕುಮಾರಸ್ವಾಮಿ ಅಃ ಅಂತೋಣಿ ಬಿನ್ ವೀರತಯ್ಯ, ಕಣ್ಣೂರು ಗ್ರಾಮ ಎಂದು ತಿಳಿಸಿರುತ್ತಾನೆ. ನಂತರ ಆತನನ್ನು ಜೀಪಿನಲ್ಲಿ ಕೂರಿಸಿಕೊಂಡು ಠಾಣೆಗೆ ಕರೆದುಕೊಂಡು ಹೋಗಿ ಠಾಣಾಧಿಕಾರಿಗಳಾದ ಚಾಸಾ–13 ರವರ ಮುಂದೆ ಹಾಜರುಪಡಿಸಿ ಸದರಿ ಆಸಾಮಿಯ ವಿರುದ್ಧ ಮುಂದಿನ ಕ್ರಮ ಕೈಗೊಳ್ಳುವಂತೆ ನಿವೇದನೆಯನ್ನು ನೀಡಿರುತ್ತೇನೆ. ನಂತರ ಚಾಸಾ–13 ರವರು ಮಹಜರ್ ಮುಖೇನ ಮಾಲು ಮತ್ತು ಆರೋಪಿಯನ್ನು ಇಲಾಖಾ ವಶಕ್ಕೆ ಪಡೆದುಕೊಂಡಿರುತ್ತಾರೆ. ಸದರಿ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ.

ಸಾಕ್ಷಿಯು ನಿವೇದನೆಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ನಿವೇದನೆಯನ್ನು ನಿಪಿ–2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಅಮಾನತ್ತು ಮಹಜರ್ ನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–1 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ–1(ಬಿ) ಎಂದು ಗುರುತಿಸಲಾಯಿತು. ನಾನು ಆರೋಪಿ ಮತ್ತು ಮುದ್ದೆಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 90 ಎಂ.ಎಲ್ ನ 30 ಹೈವಾರ್ಡ್ಸ್ ಚಿಯರ್ಸ ವಿಸ್ಕಿ ಮತ್ತು ಹಳದಿ ಬ್ಯಾಗನ್ನು ನೋಡಿ ಗುರುತಿಸಿದ್ದು ಮದ್ಯದ ಪೌಚುಗಳನ್ನು ಈಗಾಗಲೇ ಮು.ಮಾ –1 ರಿಂದ 30 ಎಂದು ಗುರುತಿಸಿದ್ದು, ಹಳದಿ ಬ್ಯಾಗನ್ನು ಮು.ಮಾ –31 ಎಂದು ಗುರುತಿಸಲಾಯಿತು.

ಆರೋಪಿಯು ಈ ದಿನ ನ್ಯಾಯಾಲಯದ ಮುಂದೆ ಗೈರು ಹಾಜರಾಗಿದ್ದು ಆರೋಪಿ ಪರ ವಕೀಲರು ಆರೋಪಿಯ ಗುರುತಿನ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಂ.ಎನ್. ವಕೀಲರಿಂದಃ (ಎಂ.ಎಂ.ಪಿ ವಕೀಲರ ಪರವಾಗಿಃ**

ನಮಗೆ ಮಾಹಿತಿ ಬಂದಾಗ ನಾವು ಮಂಗಲ ಗ್ರಾಮದ ಮುಖ್ಯ ರಸ್ತೆಯಲ್ಲಿದ್ದೇವು. ಗಸ್ತು ಕಾರ್ಯ ಸಮಯದಲ್ಲಿ ನಾವು ಸಮವಸ್ತ್ರದಲ್ಲಿದ್ದೇವು. ಮಾಹಿತಿ ಬಂದಾಗ ಸಮಯ ಬೆಳಗ್ಗೆ 9–15 ಗಂಟೆ ಆಗಿತ್ತು. ಆರೋಪಿಯ ಕುರಿತು ಮಾಹಿತಿ ನಮಗೆ ನೇರವಾಗಿ ಒಬ್ಬ ಹುಡುಗ ಬಂದು ನಮಗೆ ತಿಳಿಸಿರುತ್ತಾನೆ. ಪ್ರಕರಣ ಪೂರ್ವದಲ್ಲಿ ಆರೋಪಿಯ ಪರಿಚಯ ನನಗೆ ಇರುವುದಿಲ್ಲ. ಬಾತ್ಮೀದಾರರು ಆರೋಪಿಯ ಮುಖ ಚೆಹರೆ ಮತ್ತು ಗುರುತಿನ ಬಗ್ಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿ. ಮಂಗಲ ಗ್ರಾಮದಿಂದ ಕಣ್ಣೂರು ಗ್ರಾಮಕ್ಕೆ ಸುಮಾರು 01 ಕಿ.ಮೀ ಅಂತರ ಇರುತ್ತದೆ. ನಾನು ಆರೋಪಿಯನ್ನು ದಸ್ತಗಿರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾವುಗಳು ಆರೋಪಿಯನ್ನು ಠಾಣೆಗೆ ಕರೆದುಕೊಂಡು ಹೋದಾಗ ಸಮಯ 10–15 ಗಂಟೆ ಆಗಿತ್ತು. ಆರೋಪಿಯನ್ನು ಠಾಣೆಗೆ ಹಾಜರು ಪಡಿಸುವ ಪೂರ್ವದಲ್ಲಿ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ. ಆರೋಪಿಗು ಮುದ್ದೆಮಾಲಿಗು ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಇಲಾಖಾ ಅಂಕಿ ಅಂಶಗಳಿಗೋಸ್ಕರ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಎಂ. ರಂಜಿತ್ ಕುಮಾರ್)
ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.

ಒಂದನೇ ಅಪರ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ,

ಕೊಳ್ಳೇಗಾಲ

ಸಿ ಸಿ ಸಂಖ್ಯೆ 1418/2023

ಚಾಸಾ 5 ಪ್ರಾಸಾ 4

| | | |
|---|---|---|
| ಸಾಕ್ಷಿಯ ಹೆಸರು | : | ಜಯರಾಮ್ |
| ತಂದೆಯ ಹೆಸರು | : | ಮಹದೇವ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ಪೊಲೀಸ್ ಪೇದೆ. ಮ.ಮ. ಬೆಟ್ಟ |
| ವಾಸ ಸ್ಥಳ | : | ಮ.ಮ. ಬೆಟ್ಟ |

ದಿನಾಂಕ 01.06.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ – ಮಾನ್ಯ ಸಸಅ ರವರಿಂದ

ನಾನು 2021 ರಿಂದ ಈವರೆವಿಗೂ ಮ.ಮ. ಬೆಟ್ಟ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 01.06.2023 ರಂದು ನಾವು ಠಾಣೆಯಲ್ಲಿರುವಾಗ ಚಾ 1 ರವರು ನನ್ನನ್ನು ಮತ್ತು ಚಾಸಾ 4 ರವರನ್ನು ಕರೆಯಿಸಿ ತಾಳಬೆಟ್ಟದ ಮುಖ್ಯ ರಸ್ತೆಯಲ್ಲಿ ಒಬ್ಬ ಅಸಾಮಿ ಮದ್ಯ ಸಾಗಾಣಿಕೆ ಮಾಡುತ್ತಿರುವುದಾಗಿ ಮಾಹಿತಿ ಬಂದಿರುತ್ತದೆ ಅಲ್ಲಿಗೆ ಹೋಗಬೇಕಾಗಿ ತಿಳಿಸಿರುತ್ತಾರೆ. ಆ ನಂತರ ನಾನು, ಚಾಸಾ 1 ಮತ್ತು 4 ರವರು ಮಹದೇಶ್ವರ ಬೆಟ್ಟದ ಬಸ್ ನಿಲ್ದಾಣಕ್ಕೆ ಬಂದಿದ್ದು ಅಲ್ಲಿ ಚಾಸಾ 2 ಮತ್ತು 3 ರವರಿಗೆ ಚಾಸಾ 1 ರವರು ಪಂಚರಾಗಿ ಸಹಕರಿಸುವಂತೆ ನೊಟೀಸ್ ನೀಡಿ, ಅವರ ಜೊತೆ ತಾಳಬೆಟ್ಟದ ಮ್ಜುಖ್ಯ ರಸ್ತೆಯ ಪೊನ್ನಾಚಿ ರಸ್ತೆಗೆ ಹೋಗಿರುತ್ತೇವೆ.

ನಾನು, ಚಾಸಾ 1, 4 ಹಾಗೂ ಪಂಚರುಗಳು ತಾಳ ಬೆಟ್ಟದ ಪೊನ್ನಾಚಿ ರಸ್ತೆಯಲ್ಲಿ ಮದ್ಯಾಹ್ನ 3.30 ರಿಂದ 4.00 ಗಂಟೆ ಸಮಯದಲ್ಲಿ ವಾಹನಗಳನ್ನು ಪರಿಶೀಲನೆ ಮಾಡುತ್ತಿದ್ದು, ಒಬ್ಬ ವ್ಯಕ್ತಿ ತಾಳಬೆಟ್ಟದ ಕಡೆಯಿಂದ ಪೊನ್ನಾಚಿ ಕಡೆಗೆ ನಡೆದುಕೊಂಡು ಕೈಯಲ್ಲಿ ಒಂದು ಪ್ಲಾಸ್ಟಿಕ್ ಚೀಲವನ್ನು ಹಿಡಿದುಕೊಂಡು

ಬರುತ್ತಿದ್ದನು. ಆತನನ್ನು ತಡೆದು ನಿಲ್ಲಿಸಿ ಆತನ ಕೈಯಲ್ಲಿದ್ದ ಬ್ಯಾಗ್ ನ್ನು ಪರಿಶೀಲಿಸಿದಾಗ, 180ಎಂ.ಎಲ್. ನ ಓಟಿ ವಿಸ್ಕಿಯ 20 ಟೆಟ್ರಾ ಪ್ಯಾಕ್ ಗಳು ಹಾಗೂ ಇನ್ನೂ 5 ಬೇರೆ ಕಂಪನಿಯ ಮದ್ಯದ ಪ್ಯಾಕ್ ಗಳು ಇರುವುದು ಕಂಡುಬಂದಿರುತ್ತದೆ. ಆ ನಂತರ ಚಾಸಾ 1 ರವರು ಅಸಾಮಿಯನ್ನು ವಿಚಾರಣೆ ಮಾಡಲಾಗಿ ಆತ ತನ್ನ ಹೆಸರು ಮುರುಗೇಶ್ ಬಿನ್ ಪುಟ್ಟಮಾದಶೆಟ್ಟಿ, ಜಯಮ್ಮನದೊಡ್ಡಿ, ಪೊನ್ನಾಚಿ ಗ್ರಾಮ ಎಂದು ತಿಳಿಸಿರುತ್ತಾನೆ. ಆ ನಂತರ ಸದರಿ ಆರೋಪಿಯು ಹೊಂದಿದ್ದ 25 ಮದ್ಯದ ಪ್ಯಾಕೆಟ್ ಗಳನ್ನು ಅಮಾನತ್ತು ಪಡಿಸಿಕೊಂಡು ಸ್ಥಳದಲ್ಲಿ ಮಹಜರ್ ತಯಾರಿಸಲಾಗಿರುತ್ತದೆ. ಆನಂತರ ಆರೋಪಿ ಮತ್ತು ಮಾಲಿನ ಜೊತೆ ಠಾಣೆಗೆ ಹಾಜರಾಗಿರುತ್ತೇವೆ. ನಾನು ತನಿಖಾಧಿಕಾರಿಯ ಸಮಕ್ಷಮ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಸಮಕ್ಷಮ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಸಮಕ್ಷಮ ಇರುವ ಮಾದರಿ ತೆಗೆದ 5 ಟೆಟ್ರಾ ಪ್ಯಾಕ್ ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಒಟ್ಟಾಗಿ ಮು.ಮಾ. 1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಸ್.ಪಿ.ಬಿ. ವಕೀಲರಿಂದಃ (ಪಿ.ಹೆಚ್.ಕೆ. ವಕೀಲರ ಪರವಾಗಿಃ**

ಆ ದಿನ ಸ್ಥಳದಲ್ಲಿ ಜರುಗಿಸಿದ ಸ್ಥಳ ಮತ್ತು ಅಮಾನತ್ತು ಮಹಜರ್ ಗೆ ನಾನು ಸಹಿ ಹಾಕಿರುವುದಿಲ್ಲ. ಆ ದಿನ ಸ್ಥಳದಲ್ಲಿ ಟೈಪ್ ಮಾಡಿ ಠಾಣೆಯಲ್ಲಿ ಪ್ರಿಂಟ್ ತೆಗೆಯಲಾಯಿತು. ಸಾಕ್ಷಿಗಳ ಸಹಿಯನ್ನೂ ಸಹ ಠಾಣೆಯಲ್ಲಿ ಪಡೆದುಕೊಳ್ಳಲಾಯಿತು ಎಂದರೆ ಸರಿ. ಆ ದಿನ ಚಾಸಾ 1 ರವರು ಆರೋಪಿಯ ಅಂಗಶೋಧನೆ ಮಾಡಿರುತ್ತಾರೆ. ಆ ಸಮಯದಲ್ಲಿ ಆರೋಪಿಯ ಬಳಿ ಯಾವುದೇ ವಸ್ತುಗಳು ಸಿಕ್ಕಿರುವುದಿಲ್ಲ. ಆ ದಿನ ಆರೋೀಪಿಯಿಂದು ವಶಕ್ಕೆ ಪಡೆದ ಮಾಲುಗಳ ಮೇಲೆ ಇದ್ದ ಕ್ರಮಸಂಖ್ಯೆ ಮತ್ತು ದಿನಾಂಕ ಹಾಗೂ ಬ್ಯಾಚ್ ನಂಬರ್ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಮು.ಮಾ. 1 ರೀತ್ಯಾ ಟೆಟ್ರಾ ಪ್ಯಾಕ್ ಗಳು ಎಲ್ಲಾ ಮದ್ಯದ ಅಂಗಡಿಗಳಲ್ಲಿ ಸಿಗುತ್ತದೆ ಎಂದರೆ ಸರಿ. ನಾನು ಸ್ಥಳಕ್ಕೆ ಹೋಗಿಲ್ಲ, ಯಾವುದೇ ಅಮಾನತ್ತು ಪಂಚನಾಮೆಯ ಭಾಗವಾಗಿಲ್ಲ ಆರೋಪಿಯಿಂದ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ ನಮ್ಮ ಠಾಣಾಧಿಕಾರಿಗಳ

ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯ ಸಮಕ್ಷಮ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಎಂ. ರಂಜಿತ್ ಕುಮಾರ್)
ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.